# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ. 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070.

**website: www.krvp.in**

## ತ್ರೈವಾರ್ಷಿಕ ಚುನಾವಣೆಯ ವೇಳಾಪಟ್ಟಿ

## Calender of Events

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು** ವಿಜ್ಞಾನ ಭವನ, ನಂ. 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070. ಈ ಪರಿಷತ್ತಿನ ಚುನಾವಣಾ ಫಲಿತಾಂಶ ಪ್ರಕಟಣಾ ದಿನಾಂಕದಿಂದ ಮುಂದಿನ 3 ವರ್ಷಗಳ ಅವಧಿಯ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಚುನಾಯಿಸಲು ದಿನಾಂಕ: 22.06.2025ರ ಭಾನುವಾರ ಬೆಳಿಗ್ಗೆ 08.00 ಘಂಟೆಯಿಂದ ಸಂಜೆ 5.00 ಘಂಟೆಯವರೆಗೆ ಚುನಾವಣೆಯನ್ನು ನಡೆಸಲಾಗುವುದೆಂದು ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ ಈ ಚುನಾವಣಾ ನೋಟೀಸ್ ನೀಡಲಾಗಿದೆ.

| ಕ್ರಮ ಸಂಖ್ಯೆ | ವಿವರ | ದಿನಾಂಕ |
|---|---|---|
| 1. | ನಾಮಪತ್ರ ಸ್ವೀಕಾರ ಆರಂಭದ ದಿನಾಂಕ ಮತ್ತು ಸಮಯ | 26.05.2025 ರಂದು<br>ಬೆಳಿಗ್ಗೆ 10.00 ರಿಂದ 2.00 ಘಂಟೆಯವರೆಗೆ<br>ಆಯಾ ವಿಭಾಗದ ಚುನಾವಣಾಧಿಕಾರಿಯವರಿಗೆ |
| 2. | ನಾಮಪತ್ರಗಳನ್ನು ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ | 31.05.2025 ರಂದು<br>ಬೆಳಿಗ್ಗೆ 10.00 ರಿಂದ 2.00 ಘಂಟೆಯವರೆಗೆ<br>ಆಯಾ ವಿಭಾಗದ ಚುನಾವಣಾಧಿಕಾರಿಯವರಿಗೆ |
| 3. | ನಾಮಪತ್ರಗಳ ಪರಿಶೀಲನೆ ದಿನಾಂಕ ಮತ್ತು ಸಮಯ | 02.06.2025 ರಂದು<br>ಅಪರಾಹ್ನ 12.00 ಗಂಟೆಯ ನಂತರ ಆಯಾ ವಿಭಾಗದ ಚುನಾವಣಾಧಿಕಾರಿಯವರಿಂದ |
| 4. | ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ | 02.06.2025 ರಂದು<br>ನಾಮಪತ್ರ ಪರಿಶೀಲನೆ ನಂತರ ಆಯಾ ವಿಭಾಗದ ಚುನಾವಣಾಧಿಕಾರಿಯವರಿಂದ |
| 5. | ನಾಮಪತ್ರಗಳನ್ನು ಹಿಂಪಡೆಯಲು ಅಂತಿಮ ದಿನಾಂಕ ಮತ್ತು ಸಮಯ | 06.06.2025 ರಂದು<br>ಅಪರಾಹ್ನ 3–00 ಗಂಟೆಯವರೆಗೆ ಆಯಾ ವಿಭಾಗದ ಚುನಾವಣಾಧಿಕಾರಿಯವರಿಗೆ |
| 6. | ಚುನಾವಣೆ ಅವಶ್ಯಕವಿದ್ದಲ್ಲಿ, ಚುನಾವಣಾ ಕಣದಲ್ಲಿನ ಅಂತಿಮ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | 09.06.2025 ರಂದು<br>ಸಂಜೆ 3–30 ಗಂಟೆಯ ನಂತರ<br>ಆಯಾ ವಿಭಾಗದ ಚುನಾವಣಾಧಿಕಾರಿಯವರಿಂದ |
| 7. | ಅಗತ್ಯವಿದ್ದಲ್ಲಿ ಮತದಾನದ ಸ್ಥಳ:<br>ದಿನಾಂಕ ಮತ್ತು ಸಮಯ | 22.06.2025 ರಂದು<br>ಬೆಳಿಗ್ಗೆ 08.00 ರಿಂದ ಸಂಜೆ 5.00 ಘಂಟೆಯವರೆಗೆ<br>ಆಯಾ ಜಿಲ್ಲಾ ಹಾಗೂ ತಾಲ್ಲೂಕು ಮತದಾನ ಕೇಂದ್ರಗಳಲ್ಲಿ |
| 8. | ಮತ ಎಣಿಕೆಯ ದಿನಾಂಕ ಮತ್ತು ಸಮಯ | 22.06.2025 ರಂದು<br>ಮತದಾನ ಮುಗಿದ ನಂತರ, ಆಯಾ ಮತದಾನದ ಕೇಂದ್ರಗಳಲ್ಲಿ |

| 9. | ಚುನಾವಣಾ ಫಲಿತಾಂಶ ಪ್ರಕಟಣೆ | 24.06.2025 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಬೆಂಗಳೂರು ರಲ್ಲಿನ ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಸಂಘದ ವೆಬ್‌ಸೈಟಿನಲ್ಲಿ |
|---|---|---|

## : ಸೂಚನೆಗಳು :

1. ಸಂಘದ ಉಪನಿಯಮದ ಸಂಖ್ಯೆ 6.4.1 ರ ಪ್ರಕಾರ ಕಾರ್ಯಕಾರಿ ಸಮಿತಿಗೆ ಒಟ್ಟು 24 ಜನ ಸದಸ್ಯರನ್ನು ವಿಭಾಗವಾರು ಕೆಳಕಂಡಂತೆ ಚುನಾಯಿಸಬೇಕಾಗಿರುತ್ತದೆ.

| ಕ್ರ.ಸಂ | ವಿಭಾಗ | ಸಾಮಾನ್ಯ ಸ್ಥಾನಗಳು | ಮಹಿಳಾ ಮೀಸಲು | ಪರಿಶಿಷ್ಟ ಜಾತಿ/ಪಂಗಡ ಮೀಸಲು ಸ್ಥಾನ | ಒಟ್ಟು ಆಯ್ಕೆಯಾಗ ಬೇಕಾದ ಸ್ಥಾನಗಳು |
|---|---|---|---|---|---|
| 1. | ಬೆಂಗಳೂರು | **05** | **01** | - | **06** |
| 2. | ಬೆಳಗಾವಿ | **06** | - | - | **06** |
| 3. | ಕಲಬುರ್ಗಿ | **06** | - | - | **06** |
| 4. | ಮೈಸೂರು | **05** | - | **01** | **06** |

2. ಆಯಾ ವಿಭಾಗಕ್ಕೆ ಮೀಸಲಿರಿಸಿದ ಸಂಖ್ಯೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡಲು ಆಯಾ ವಿಭಾಗದ ಸದಸ್ಯರು ಮಾತ್ರ ಮತ ಚಲಾಯಿಸತಕ್ಕದ್ದು ಹಾಗೂ ಆಯಾ ವಿಭಾಗದ ಸದಸ್ಯರು ಮಾತ್ರ ಆಯಾ ವಿಭಾಗದ ಉಮೇದುವಾರರಾಗಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸತಕ್ಕದ್ದು. ಮತ್ತು ಆಯಾ ವಿಭಾಗದ ಉಮೇದುವಾರರಿಗೆ ಸೂಚಕರಾಗಿ ಹಾಗೂ ಅನುಮೋದಕರಾಗಿ ಸಹಿ ಮಾಡಲು ಆಯಾ ವಿಭಾಗದ ಸದಸ್ಯರು ಮಾತ್ರ ಅರ್ಹರಾಗಿರುತ್ತಾರೆ.
3. ಆಯಾ ವಿಭಾಗಗಳಿಂದ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಮತ್ತು ನಾಮಪತ್ರವನ್ನು ವಾಪಸ್ಸು ಪಡೆಯಲು ಸಲ್ಲಿಸುವ ಪತ್ರಗಳನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವೆಬ್‌ಸೈಟಿನಲ್ಲಿ ಪಡೆಯಬಹುದಾಗಿದೆ
4. ಆಯಾ ವಿಭಾಗಗಳಿಂದ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಮತ್ತು ನಾಮಪತ್ರವನ್ನು ವಾಪಸ್ಸು ಪಡೆಯಲು ಸಲ್ಲಿಸುವ ಪತ್ರಗಳನ್ನು ಆಯಾ ವಿಭಾಗದ ಚುನಾವಣಾ ಅಧಿಕಾರಿಯವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟವರಿಗೆ ಉಮೇದುವಾರರೇ ಖುದ್ದಾಗಿ ಸಲ್ಲಿಸುವುದು.
5. ಸದಸ್ಯರುಗಳು ಒಬ್ಬ ಉಮೇದುವಾರರಿಗೆ ಮಾತ್ರ ಸೂಚಕ ಅಥವಾ ಅನುಮೋದಕರಾಗತಕ್ಕದ್ದು. ತಪ್ಪಿದಲ್ಲಿ ಒಂದಕ್ಕಿಂತ ಹೆಚ್ಚಾಗಿ ಸೂಚಕರಾಗಿ ಅಥವಾ ಅನುಮೋದಕರಾಗಿ ಸಹಿ ಮಾಡಲ್ಪಟ್ಟ ಎಲ್ಲಾ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
6. ಸದಸ್ಯರು ತಮ್ಮ ನಾಮಪತ್ರಗಳಲ್ಲಿ ತಾವು ಯಾವ ವಿಭಾಗದಿಂದ ಮತ್ತು ಯಾವ (ಸಾಮಾನ್ಯ/ಮಹಿಳಾ ಮೀಸಲು/ಪರಿಶಿಷ್ಟ ಜಾತಿ–ಪಂಗಡ ಮೀಸಲು) ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.
7. ಯಾವುದೇ ಅಭ್ಯರ್ಥಿಯು ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗತಕ್ಕದ್ದಲ್ಲ.
8. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರಗಳ ಜೊತೆಯಲ್ಲಿ ಆ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಜಾತಿ

ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಜಾತಿ ಪ್ರಮಾಣಪತ್ರವನ್ನು ಲಗತ್ತಿಸದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

9. ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಸಂಘದ ಹೆಸರಿಗೆ ನಗದು ರೂಪದಲ್ಲಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ರೂ.1000/- ಗಳನ್ನು (ಒಂದು ಸಾವಿರ ರೂಪಾಯಿಗಳು ಮಾತ್ರ) ಚುನಾವಣಾ ಠೇವಣಿಯಾಗಿ ಪಾವತಿಸಬೇಕು ಠೇವಣಿಯನ್ನು ನಾಮಪತ್ರವನ್ನು ಸಲ್ಲಿಸುವ ಮುಂಚಿತವಾಗಿ ಪಾವತಿಸಿ ರಸೀದಿಯನ್ನು/ಪೇ ಆರ್ಡರ್/ಡಿಮ್ಯಾಂಡ್ ಡ್ರಾಫ್ಟ್ ನಾಮಪತ್ರದೊಂದಿಗೆ ಲಗತ್ತಿಸಬೇಕು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

10. ನಾಮಪತ್ರ ಸ್ವೀಕೃತಿ, ನಾಮಪತ್ರ ಪರಿಶೀಲನೆ, ನಾಮಪತ್ರಗಳನ್ನು ಹಿಂಪಡೆಯುವ ಅರ್ಜಿ ಸ್ವೀಕೃತಿ ಮತ್ತು ಅಂತಿಮ ಅಭ್ಯರ್ಥಿಗಳ ಪಟ್ಟಿ ಪ್ರಕಟಣಾ ಸ್ಥಳಗಳನ್ನು ಕೆಳಕಂಡಂತೆ ಕಂದಾಯ ವಿಭಾಗವಾರು ನಿಗಧಿಪಡಿಸಲಾಗಿದೆ

| ಕ್ರಮ ಸಂಖ್ಯೆ | ಕಂದಾಯ ವಿಭಾಗ | ಸ್ಥಳ |
|---|---|---|
| 1. | ಬೆಂಗಳೂರು ವಿಭಾಗ | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೇಂದ್ರ ಕಚೇರಿ, ವಿಜ್ಞಾನ ಭವನ, ನಂ. 24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070. |
| 2. | ಬೆಳಗಾವಿ ವಿಭಾಗ | ಡಾ॥ ಸ. ಜ. ನಾ ವಿಜ್ಞಾನ ಕೇಂದ್ರ ಕಚೇರಿ ಶಿವಬಸವನಗರ, ಬೆಳಗಾವಿ 590 010. |
| 3. | ಕಲಬುರ್ಗಿ ವಿಭಾಗ | ಜೀವನ್ ಪ್ರಕಾಶ್ ಪ್ರೌಢಶಾಲೆ, ಹಳೇ ಜೇವರ್ಗಿ ರಸ್ತೆ, ಕಲಬುರಗಿ. |
| 4. | ಮೈಸೂರು ವಿಭಾಗ | ಬಿ.ಎಸ್.ಎಸ್. ವಿದ್ಯೋದಯ, ರಾಮಯ್ಯ ರಸ್ತೆ, ಕೃಷ್ಣಮೂರ್ತಿ ಪುರಂ, ಮೈಸೂರು. |

11. ಕಂದಾಯ ವಿಭಾಗವಾರು ಚುನಾವಣೆ ನಡೆಸಲು ನೇಮಕವಾದ ಚುನಾವಣಾಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

12. ಚುನಾವಣಾ ಮತದಾನ ನಡೆಯುವ ಆಯಾ ಜಿಲ್ಲಾ / ತಾಲ್ಲೂಕು ಮತದಾನದ ಕೇಂದ್ರಗಳ ಸ್ಥಳಗಳನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

13. ಚುನಾವಣಾ ಪ್ರಕ್ರಿಯೆಗಳನ್ನು ಸಂಘಗಳ ನೋಂದಣಾಧಿಕಾರಿಯವರಿಂದ ನೋಂದಾಯಿತವಾಗಿರುವ ಚುನಾವಣಾ ನಿಯಮಗಳ ರೀತಿ ನಡೆಸಲಾಗುವುದು.

14. ಮೇಲೆ ತಿಳಿಸಲಾದ ನೋಂದಾಯಿತ ಚುನಾವಣಾ ನಿಯಮಗಳನ್ನು ಈ ವೇಳಾಪಟ್ಟಿಯೊಂದಿಗೆ ಲಗತ್ತಿಸಿದೆ.

15. ಚುನಾವಣಾ ಪ್ರಕ್ರಿಯೆಗಳಲ್ಲಿ ಯಾವುದೇ ರೀತಿಯ ಸಂಶಯ ಉದ್ಭವಿಸಿದಲ್ಲಿ ಮುಖ್ಯ ಚುನಾವಣಾಧಿಕಾರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿನಾಂಕ : 17.05.2025
ಸ್ಥಳ : ಬೆಂಗಳೂರು

(ಪವನ್ ಕುಮಾರ್. ಎಸ್)
ಮುಖ್ಯ ಚುನಾವಣಾಧಿಕಾರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು
ಹಾಗೂ
ಸಹಕಾರ ಅಭಿವೃದ್ಧಿ ಅಧಿಕಾರಿ